# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1035**
ಸದಸ್ಯರ ಹೆಸರು : ಶ್ರೀಮತಿ ಉಮಾಶ್ರೀ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 25-07-2024

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕನ್ನಡ ಚಿತ್ರಗಳಿಗೆ ಸಬ್ಸಿಡಿ ನೀಡುವ ಯೋಜನೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಅನುಷ್ಠಾನ ಗೊಳ್ಳುತ್ತಿದ್ದು ಇತ್ತೀಚಿನ ವರ್ಷಗಳಲ್ಲಿ ಆಯಾ ವರ್ಷಗಳ ಚಲನಚಿತ್ರಗಳಿಗೆ ಆಯಾ ವರ್ಷವೇ ಸಬ್ಸಿಡಿ ಮಾಡುವ ನಿಯಮವನ್ನು ಪಾಲಿಸಲಾಗುತ್ತಿಲ್ಲದಿರುವುದಕ್ಕೆ ಕಾರಣಗಳೇನು; | 2017 ಮತ್ತು 2018ನೇ ಸಾಲಿನ ಗುಣಾತ್ಮಕ ಚಲನಚಿತ್ರಗಳ ಸಹಾಯಧನ ಆಯ್ಕೆ ಸಮಿತಿ ಆಯ್ಕೆ ಪ್ರಕ್ರಿಯೆ ಕುರಿತು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದ್ದ ಕಾರಣ ಹಾಗೂ ಕೋವಿಡ್-19ರ ಕಾರಣದಿಂದಾಗಿ ಎರಡು ವರ್ಷಗಳಿಗೂ ಹೆಚ್ಚುಕಾಲ ಕೋವಿಡ್ ನಿಯಮಾವಳಿಗಳು ಜಾರಿಯಲ್ಲಿದ್ದುದ್ದರಿಂದ, ಕನ್ನಡ ಚಿತ್ರಗಳಿಗೆ ಸಬ್ಸಿಡಿ ನೀಡುವ ಯೋಜನೆಗೆ ಆಯ್ಕೆ ಸಮಿತಿಯನ್ನು ರಚಿಸಿರುವುದಿಲ್ಲ. |
| (ಆ) | ಇದುವರೆಗೂ ಎಷ್ಟು ಚಲನಚಿತ್ರಗಳಿಗೆ ಸಬ್ಸಿಡಿ ನೀಡುವುದು ಬಾಕಿ ಇದೆ; ಅದರ ಒಟ್ಟು ಮೊತ್ತ ಎಷ್ಟು ; ಅದನ್ನು ಯಾವಾಗ ಬಿಡುಗಡೆ ಮಾಡಲಾಗುತ್ತದೆ? | ಪ್ರಸ್ತುತ ರಾಜ್ಯ ಸರ್ಕಾರವು 2019, 2020, 2021 ಮತ್ತು 2022ನೇ ಕ್ಯಾಲೆಂಡರ್ ವರ್ಷದ ಗುಣಾತ್ಮಕ ಚಲನಚಿತ್ರಗಳಿಗೆ ಸಹಾಯಧನ ನೀಡುವ ಸಂಬಂಧ ಚಲನಚಿತ್ರಗಳನ್ನು ಆಯ್ಕೆ ಮಾಡಲು ಸಮಿತಿ ರಚಿಸಿ ಆದೇಶ ಹೊರಡಿಸಿದೆ. ಸಮಿತಿಗಳು ಚಲನಚಿತ್ರ ವೀಕ್ಷಣೆ ಕಾರ್ಯ ಕೈಗೊಳ್ಳಲ್ಲಿದ್ದು ಈ ವರ್ಷದ ಅಂತ್ಯದೊಳಗೆ ನಾಲ್ಕು ವರ್ಷಗಳ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.<br><br>ನಿಗದಿತ ದಾಖಲೆ ಸಲ್ಲಿಸದ ಕಾರಣ ಇದುವರೆಗೆ 32 ಚಲನಚಿತ್ರಗಳಿಗೆ ಸಹಾಯಧನ ಪಾವತಿ ಬಾಕಿಯಿದ್ದು, ಅದಕ್ಕೆ ತಗಲುವ ಒಟ್ಟು ಮೊತ್ತ ರೂ.3.5ಕೋಟಿ. ಈ ಆರ್ಥಿಕ ವರ್ಷದಲ್ಲಿ ಬಿಡುಗಡೆಗೊಳಿಸಲಾಗುವುದು. |

**ಸಂಖ್ಯೆ:ಕೆಸಿಐ/193/ಪಿಐಪಿ/2024**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**